ಉಳುಸಪ್ಪೋ' ಅನ್ನುತ್ತಲೇ ಅದಾಗಲೇ ಸಾವಿನ ಮನೆ ಸಮೀಪಿಸಿದ್ದ ಸಂಗಮ್ಮಳು ಅಂಗಾತ ಮಲುಗಿದ್ದನ್ನು ಕಂಡು 'ಎಮ್ಮಾ ನನ್ನ ಕ್ಷಮಿಸಮ್ಮೋ ಎಂದೋ' ದುರಗನು ಕಣ್ಣೀರಿಟ್ಟನು. 'ಯಾವ ದೇಶುದ್ದೋ ಏನೋ... ಅವು ಊರಾಕ ಬಂದ ಊರು ಹಾಳು ಮಾಡಿದ್ವು ' ಎಂದು ಶೆಟ್ರ ರುದ್ರಮ್ಮಳು ಸಾಪಳಿಸತೊಡುಗಿತ್ತು.

'ಸಾಲಿ ಕಲ್ತಾರೆಲ್ಲಾ... ನಿನ್ನಂಗ ಇಚಾರ ಮಾಡಿದ್ರ ಸಂಗಮ್ಮನ ಹೊಲಾ ಇನ್ನೊಬ್ರ ಪಾಲು ಆಕ್ಕಿದ್ದಲಪ್ಪೋ' ಎಂದು ಕುರುಬ್ರು ಹನಮವ್ವಳು ದುರಗನತ್ತ ತಿರುಗಿ ಮಾತಾಡತೊಡಗಿತ್ತು. ತಾಸೊತ್ತಿನಿಂದಲೇ ತೆಳುವಾಗಿ ಉರಿಯುತೊಡುಗಿದ್ದ ಸೂರ್ಯ ಅಲ್ಲಿ ಪಶ್ಚಿಮದಲ್ಲಿ ಮೊಕುವ ಕೆಂಪಾಗಿಸಿ ಮೌನದಿಂದಿಳಿಯುತಲಿದ್ದನು. ನಿತ್ಯ ಗುಡ್ಡವೇರಿ ಅಲ್ಲಿನ ಹುಲ್ಲು ಮೇಯ್ದು ಹೊಟ್ಟೆ ಹೊರೆ ಮಾಡಿ ಸಂಜೆ ಹೊತ್ತಿಗೆ ಊರಿನತ್ತ ಮೊಕುವ ಮಾಡಿ ಹಸುಗೂಸುಗಳಿಗೆ ಹಾಲಾಗುತ್ತಿದ್ದ ದನು-ಕರುಗಳು ಆ ದಿನ ಗುಡ್ಡವನ್ನು ಕಣ್ಣೆತ್ತಿ ನೋಡುದೇ ಒಣಕಲು ತೊಗುಲಿನೊಂದಿಗೆ ಮಲಗಿದ್ದವು. ಮುದ್ಕಿಗೆ ಬಾಯಿ ಬೀಳುತ್ತಲೇ ಗುಡಿಸಲತ್ತ ಬಂದು, ಪಕ್ಕದ ಚಾದಂಗುಡಿಯಲ್ಲಿ ಕೂತು, ಮುರಿದು ಅಲ್ಲಲ್ಲೇ ಬಿದ್ದಿದ್ದ ಆ ತುಂಡು ಬೀಡಿ-ಸೀಗರೇಟುಗಳಿಗೆ ಬೆಂಕಿ ಹೊತ್ತಿಸುತ್ತಲೇ ಇದ್ದ ಕುರುಬುರ ಮುದಿಯಜ್ಜನು 'ಲೇ ಶಿವ್ಯಾ, ಯಂಕಾ ಕೊಡ್ಲಿ ತಗೋರಿ ಹುಂಚಿ ಪಟ್ಯನ ಜಾಲಿ ಗಿಡ ಅಷ್ಟ ಕಡೀರಿ ಸಾಕು' ಅನ್ನುತ್ತಲೇ ದುರುಗನು ಎದೆಹುಣ್ಣಿನಂತಹ ನೋವು ಉಣ್ಣತೊಡುಗಿದ್ದನು. ಗುಡ್ಡದ ಸಂದಿಯಲ್ಲಿ ಆ ಮಶೀನುಗಳ ಹಾರಿಸುವ ದೂಳಿಗೆ ಬೆದುರಿಹೋದಂತೆ, ಆತನು ಅಲ್ಲಿ ಸಂಪೂರ್ಣ ಮರೆಯಾದನು.

* * *

'ಊರು ನಮಗೇನೂ ಮಾಡ್ಲಿಲ್ಲ ಅನ್ನುವುದಕ್ಕಿಂತ... ಊರಿಗೆ ನಾವೇನ ಮಾಡಿದೀವಿ ಅನ್ನುವುದು ಮುಖ್ಯ' ಅನ್ನುವ ವಿಚಾರವನ್ನು ತನ್ನೆದೆಯೊಳುಗ ಜ್ವಾಪಾಣದಿಂದಿರುಸಿ ಕಾಲೇಜು ಮೆಟ್ಟಲೇರಿ ನೀಚುತನುದ ವಿರುದ್ಧ ಧ್ವನಿ ಎತ್ತುತ್ತಿದ್ದ ತನ್ನೆದುರಿಗೆ ತನ್ನೂರ ಆಸ್ತಿಯು ಅವರ ಪಾಲಾಗುತ್ತಿರುವುದನ್ನು ನೋಡಿ ನೋಡಿ ದುರಗನು ಮಾನಸಿಕ ಸಮುತೋಲನ ಕಳೆದುಕೊಂಡನು. ಹಚ್ಚ ಹಸುರ ಕಾಡನಂಗಿದ್ದ ಸಂಗಮ್ಮಳ ಹೊಲ ಮಶೀನಗಳ ಬಾಯಿಗೆ ಅನ್ನವಾಗಿದ್ದು, ಊರು ಭಣಭಣ ಅನ್ನತೊಡುಗಿದ್ದು, ಈ ಬಗ್ಗೆ ಯಾರ್‍ಯಾರು ಸಹ ಪ್ರಶ್ನಿಸದೇ ಸುಮ್ಮನಾಗಿದ್ದು, ತಾನು ತನ್ನಂತವರು ಪ್ರಶ್ನಿಸಿದರೂ ಜನ ಅದುನ್ನು ತಿರಸ್ಕರಿಸಿದ್ದು, ಮುರುಕಲು ಚಪ್ಪರದಲ್ಲಿಯೇ ಸಂಗಮ್ಮ ತೆಳ್ಳುಗೆ ಬಿಕ್ಕುತ್ತಿದ್ದ ದೀಪುದಡಿ ಅದೇಸೋ ದಿನುಗಳ ಕಾಲ ಅನಾಥವಾಗಿ ಮಲುಗಿದ್ದು... ಎಲ್ಲವೂ ಮತ್ತೆ ಮತ್ತೆ ಕಾಡಿ ದುರಗನ ಮನಸು ಹಣ್ಣುಗಾಯಿ-ನೀರುಗಾಯಿಯಾಗಿತ್ತು. ತನ್ನ ಪದುವಿ ಪತ್ರಗಳು, ಪುರಸ್ಕಾರಗಳು ತನಗೆ ಅಣುಕಿಸುತ್ತಿರುವಂತೆ ಅವನಿಗೆ ಭಾಸವಾಗಿತ್ತು.

'ಲೇ ದುರಗ... ಬಾರೋ ದುರಗಣ್ಣ... ಹ್ಯಾಗದಿಯೋ ದುರಗಪ್ಪ' ಎಂದು ಮಾತಿಗಿಳಿಯುವ ಭೀಮಪ್ಪನೇ ತನ್ನ ಬದ್ಧ ವೈರಿ? ಊರ ಆಸ್ತಿ ಕದಿಯುವ ಆ ಕಂಪನಿಯವರು ನನ್ನ ವೈರಿ? ಇಲ್ಲ ಇಲ್ಲ... ಬಡವರ ಆಸ್ತಿ ಲಟಪಟಾಯಿಸಲು ಸಾಕಾರ ಕೊಡುವ ಅವರು ನನ್ನ ವೈರಿ? ಎಂದು ದುರುಗನು ಹಲುಬುತ್ತ ಹಲುಬುತ್ತ ಬುದ್ಧಿಭ್ರಮಣೆಯಾದಂತೆ ವರ್ತಿಸತೊಡುಗಿದನು. ಸಂಗಮ್ಮಳನ್ನು ಸಾಯಿಸಿದ ಅವುರಲ್ಲಿ ಬಹಳಷ್ಟು ಓದಿದ ಅವರು, ವಕೀಲನಾದ ತಾನೂ ಅವಿಭಾಜ್ಯ ಪಾಲುದಾರ ಅಂದೆನಿಸಿ 'ಸಂಗಮ್ಮ ನನ್ನ ಕ್ಷಮಿಸಮ್ಮೋ' ಎಂದು ದುರಗಪ್ಪನು ಗೋಳಾತೊಡುಗಿದನು.

ಸಂಗಮ್ಮಳ ಸಾವಿನ ನೆರುಳಲ್ಲಿ ಊರು ಓಣಿಂಬ ಓಣಿಗಳು ಸುಮ್ಮನೇ ಮಲುಗಿದ್ದರೂ ಊರು ಗುಡ್ಡದಲ್ಲಿ ಮಾತ್ರ ಅವುಗಳ ಸದ್ದು ಜೋರಾಗಿತ್ತು. ಊರು ಹೆಣ್ಣುಮಕ್ಕಳ ಗರ್ಭವನ್ನೇ ಕಿತ್ತಲು ಬಂದಂತೆ ಒಂದೊಂದಾಗಿ ಊರತ್ತಲೇ ಬರುತ್ತಿದ್ದ ಆ ಬೃಹದಾಕಾರದ ಮಸೀನುಗಳು ಮತ್ತು ಅವುರು ದುರಗನ ಕಣ್ಣುಲ್ಲಿ ನೆತ್ತುರ ಉರಿ ತರುಸಿದ್ದರು. ಅಲ್ಲಿ... ಊರು ಅಡುವಿಯ ಹೊಲುದಲ್ಲಿ... ಸಂಗಮ್ಮ ಮಣ್ಣಿಗೆ ಮಣ್ಣಾಗುತ್ತಲೇ ಅವುಳ ಗುಡಿಸಲ ಮುಂದೆ ಹೊತ್ತಿದ್ದ ಬೆಂಕಿ ಹೊಗೆಯು ಊರು ಸಾಲುಮನೆಗಳುಗೆ ಅಷ್ಟಷ್ಟೇ ಹೊಕ್ಕಂತೆಯೂ ಭಾಸವಾಗಿ ದುರುಗನ ಮನದಲ್ಲಿ ಅದೆಂತದ್ದೋ ಶಕ್ತಿ ಚಿಟುಗಿ ಆಡಿಸಿದಂತಾಗಿ, ಸಂಗಮ್ಮಳ ಗುಡಿಸಲು ನೆರುಕಿಗಿದ್ದ ಮಂಡು ಕುಡುಗೋಲನ್ನು ಹಿಡುದು ಅವುಡಗಚ್ಚಿದ್ದ ದುರಗಪ್ಪನು ಗವ್ವನೆಯ ರಾತ್ರೆಂಬ ರಾತ್ರಿಯಲ್ಲೇ ಗುಡ್ಡದತ್ತ ಮೊಕವ ಮಾಡಿದ್ದನು.

●